## ಅರಣ್ಯದಲ್ಲಿ..

ಅರಣ್ಯವನ್ನು ಪ್ಲಾಸ್ಟಿಕ್ ಹಾಗೂ ಇತರ ತ್ಯಾಜ್ಯಗಳನ್ನು ಹಾಕಿ ಕಲುಷಿತಗೊಳಿಸಬಾರದು. ಪ್ರಾಣಿಗಳನ್ನು ಕೆಣಕಬಾರದು, ಪ್ರಾಣಿಗಳನ್ನು ವೀಕ್ಷಿಸುವಾಗ ನಿಶ್ಯಬ್ದದಿಂದ ಇರಬೇಕು. ಗಟ್ಟಿಯಾಗಿ ಮಾತನಾಡದಿರಿ. ಅರಣ್ಯ ಇಲಾಖೆ ಸಿಬ್ಬಂದಿಗಳು ತಿಳಿಸುವ ಸುರಕ್ಷಿತ ಎಚ್ಚರಿಕೆಗಳನ್ನು ಚಾಚೂತಪ್ಪದೆ ಪಾಲಿಸಿ. ಕಾಡಿನಲ್ಲಿ ಮೊಬೈಲ್, ತಿಂಡಿ ತಿನಿಸು ಹಾಗೂ ಪ್ರಾಣಿಗಳಿಗೆ ಆಹಾರ ಹಾಕುವುದನ್ನು ನಿಷೇಧಿಸಿದೆ. ಕಾಡಿನಿಂದ ಯಾವ ವಸ್ತುಗಳನ್ನೂ ತೆಗೆಯಬೇಡಿ, ಪ್ರಾಣಿಗಳನ್ನು ಮುಟ್ಟಲು ಪ್ರಯತ್ನಿಸಬೇಡಿ. ಛಾಯಾಚಿತ್ರ ತೆಗೆಯುವಾಗ ಫ್ಲ್ಯಾಶ್ ಬಳಸಬೇಡಿ. ನಿಮ್ಮ ವಾಹನಗಳಿಂದ ಕೆಳಗೆ ಇಳಿಯಬೇಡಿ ಹಾಗೂ ಸೀಟಿನ ಮೇಲೆ ಎದ್ದು ನಿಲ್ಲಬೇಡಿ. ರಾತ್ರಿಯ ಹೊತ್ತು ಕ್ಯಾಂಪ್ ಬಿಟ್ಟು ಹೊರಗೆ ಹೋಗಬೇಡಿ. ಅರಣ್ಯ ಇಲಾಖೆ ಪರವಾನಗಿ ಇಲ್ಲದೆ ನಿಮ್ಮ ಸ್ವಂತ ವಾಹನವನ್ನು ಕಾಡಿನ ಒಳಗೆ ಸುತ್ತಲು ಬಳಸಬೇಡಿ. ಅರಣ್ಯ ಪರಿಧಿಯ ಸಮೀಪ ಬಂದಾಗ ನಿಮ್ಮ ವಾಹನಗಳನ್ನು ನಿಧಾನವಾಗಿ ಚಲಿಸಿ, ವಾಹನದಿಂದ ಇಳಿಯಬೇಡಿ. ಸಫಾರಿ ಹೋದಾಗ ನೀರನ್ನು ತೆಗೆದುಕೊಂಡು ಹೋಗಿ. ಸಾಧ್ಯವಾದಷ್ಟು ನಿಮ್ಮ ಉಡುಪು ಮಾಸಿದ ಬಣ್ಣದ್ದಾಗಿರಲಿ.

ಎರಡು ಕಾಲುಗಳ ಮಧ್ಯದಲ್ಲಿಟ್ಟುಕೊಂಡು ರಸ್ತೆಯಲ್ಲಿ ಸಾಗಿದ್ದು ಬಹಳ ಅಪರೂಪ ಹಾಗೂ ಮನೋಹರವಾದ ದೃಶ್ಯವಾಗಿತ್ತು. ಸಾಗುವಾಗ ರಸ್ತೆಯ ಮಧ್ಯೆ ಅಲ್ಲಲ್ಲಿ ನಿಂತು ವಿಶ್ರಮಿಸುತ್ತಿತ್ತು. ಅದು ಮರಿಗಳ ಹತ್ತಿರ ಬೇಟೆಯೊಂದಿಗೆ ಬಂದಾಗ ಮರಿಗಳು ಸತ್ತ ಜಿಂಕೆಯ ಮೇಲೆ ಎರಗಿ ಅದನ್ನು ಭಕ್ಷಿಸಿದ್ದು ವಿಶೇಷ. ಈ ದೃಶ್ಯಗಳನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದು ನನ್ನ ಅದೃಷ್ಟವೇ ಸರಿ . ಬೇಟೆ ಕಂದಕದಲ್ಲಿ ನಡೆದಿದ್ದರಿಂದ ಬೇಟೆಯನ್ನು ಹಿಡಿಯುವ ಚಿತ್ರಗಳನ್ನು ತೆಗೆಯಲಾಗಲಿಲ್ಲ. ಇದೊಂದು ವ್ಯಥೆ ನನ್ನಲ್ಲಿ ಇಂದಿಗೂ ಉಳಿದಿದೆ.

### ಅಪಾಯ ಇದೆಯೆ?

ಹುಲಿಗಳು ನಮ್ಮ ಸಫಾರಿ ವಾಹನಗಳ ಪಕ್ಕದಲ್ಲೇ ಹಾದು ಹೋಗುವ ಕ್ಷಣಗಳನ್ನು ಹಲವು ಬಾರಿ ಅನುಭವಿಸಿದ್ದೇನೆ. ಅಷ್ಟು ಹತ್ತಿರದಲ್ಲೇ ಹಾದು ಹೋದರೂ ಅವು ತಮ್ಮ ಪಾಡಿಗೆ ತಾವು ಮುಂದೆ ನಡೆಯುತ್ತವೆ. ನಮಗೆ ಯಾವ ರೀತಿಯ ಆಕ್ರಮಣವಾಗಲೀ ಅಥವಾ ಹಾನಿಯನ್ನಾಗಲೀ ಮಾಡುವುದಿಲ್ಲ. ನಾವಾಗಿಯೇ ಅವನ್ನು ಕೆಣಕುವ ಕೆಲಸ ಮಾಡುವವರೆಗೆ ಯಾವುದೇ ಅಪಾಯವಿಲ್ಲ. ಆದರೂ ಪ್ರಾಣಿಗಳ ಮನಃಸ್ಥಿತಿ ಅರಿಯುವುದು ಕಷ್ಟ. ನಮ್ಮ ಸುರಕ್ಷತೆಯನ್ನು ನಾವು ಅರಿತಿರಬೇಕು. ಅದಕ್ಕೆ ತಕ್ಕ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು.

ಹುಲಿಗಳ ದಿನಚರಿಯನ್ನು ವೀಕ್ಷಿಸುವುದೇ ಒಂದು ಒಳ್ಳೆಯ ಅನುಭವ. ಸಾಧಾರಣವಾಗಿ ಸೂರ್ಯೋದಯ ಅಥವಾ ಸೂರ್ಯಾಸ್ತದ ವೇಳೆ ಹುಲಿಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಮಧ್ಯಾಹ್ನದ ಹೊತ್ತು ನೀರು ಕುಡಿಯಲು ಬರುತ್ತವೆ. ಅವು ದಾರಿಯಲ್ಲಿ ನಡೆದು ಬರುವುದು, ಮರಿಗಳೊಡನೆ ಆಟವಾಡುವುದು, ನೀರಿನಲ್ಲಿ ತಂಪಾಗಿಸಿಕೊಳ್ಳುವುದು, ನೀರು ಕುಡಿಯುವುದು, ಮರಿಗಳಿದ್ದರೆ ನೀರಿನಲ್ಲಿ ಆಟವಾಡುವುದು, ಮರಿಗಳನ್ನು ರಕ್ಷಿಸುವುದು, ಪ್ರಾಣಿಗಳನ್ನು ಬೇಟೆಯಾಡುವುದು– ಹೀಗೆ ಹತ್ತು ಹಲವು ಅನುಭವಗಳನ್ನು ಅದೃಷ್ಟವಿದ್ದರೆ ವೀಕ್ಷಿಸಬಹುದು. ಛಾಯಾಚಿತ್ರಗ್ರಾಹಕರಿಗೆ ಇದೊಂದು ಸುಗ್ಗಿ. ಇಷ್ಟೆಲ್ಲ ಅವುಗಳ ದಿನಚರಿಯಿದ್ದರೂ ಕೆಲವೊಮ್ಮೆ ಕಾಡಿನಲ್ಲಿ ಹುಲಿಯನ್ನು ಎಷ್ಟು ಸಮಯ ಕಾದರೂ ಕಾಣುವುದೇ ಕಷ್ಟ.

ಹುಲಿಗಳು ತಮ್ಮ ಆವಾಸ ಸ್ಥಾನದ ವ್ಯಾಪ್ತಿಯನ್ನು ಅವೇ ಗುರುತಿಸಿಕೊಳ್ಳುತ್ತವೆ. ಈ ವ್ಯಾಪ್ತಿಯಲ್ಲಿ ಮತ್ತೊಂದು ಹುಲಿ ತನ್ನ ಅಧಿಪತ್ಯ ಸಾಧಿಸಲು ಬಿಡುವುದಿಲ್ಲ. ಮರಗಳನ್ನು ಕೆರೆದು ಅಲ್ಲಿ ಮೂತ್ರ ಮಾಡುವ ಮೂಲಕ ಗುರುತನ್ನು ಸ್ಥಾಪಿಸುತ್ತವೆ. ಮೂತ್ರವೇ ಬಹಳ ವಾಸನೆಯಿರುವುದರಿಂದ ಅವುಗಳಿಗೆ ತಮ್ಮ ವ್ಯಾಪ್ತಿಯನ್ನು ಗುರುತು ಹಿಡಿಯಲು ಸುಲಭ. ಅರಣ್ಯ ಕುಗ್ಗುತ್ತಿರುವುದರಿಂದ, ಅರಣ್ಯಗಳನ್ನು ಭಾಗಗಳಾಗಿಸುವುದರಿಂದ ಅವುಗಳ ಓಡಾಟವನ್ನು ನಿರ್ಬಂಧಿಸಿದಂತಾಗುತ್ತದೆ.

ಕಾಡು ಕಡಿಮೆಯಾದಂತೆ ಹುಲಿಗಳು ಇರುವ ಜಾಗದಲ್ಲೇ ಹೆಣ್ಣಿನೊಂದಿಗೆ ಮಿಲನ ಹೊಂದಿ ಮರಿಗಳನ್ನು ಪಡೆಯುತ್ತವೆ. ಮಿಲನ ಸಂದರ್ಭಗಳಲ್ಲಿ ಮಾತ್ರ ಗಂಡು ಮತ್ತು ಹೆಣ್ಣು ಹುಲಿ ಕೇವಲ ಎರಡು ಮೂರು ದಿನಗಳು ಜೊತೆಯಾಗಿ ಇರುತ್ತವೆ. ಹೆಣ್ಣು ಹುಲಿಗಳು ತನ್ನ ಮರಿಗಳನ್ನು ಎರಡು ವರ್ಷದ ತನಕ ಜೊತೆಯಲ್ಲಿ ಇರಿಸಿಕೊಂಡಿರುತ್ತವೆ. ಮರಿಗಳಿಗೆ ಉಪಯುಕ್ತವಾದ ಬೇಟೆ ಮಾಡುವುದು ಮತ್ತು ಇತರ ಕಲಿಕೆಗಳನ್ನು ಕಲಿಸುತ್ತವೆ. ಇದರಿಂದ ಬೇರೆ ಹುಲಿಗಳ ಉತ್ತಮ ತಳಿ (ಜೀನ್ಸ್) ಸಿಗದೆ ಹುಲಿಗಳ ಆರೋಗ್ಯ ಹಾಗೂ ಉಳಿಯುವಿಕೆ ಮೇಲೆ ಪರಿಣಾಮ ಬೀರುತ್ತಿದೆ.

ಮಾನವನ ಕಾಡಿನ ಅತಿಕ್ರಮಣದಿಂದ ಹುಲಿಗಳ ಉಳಿವು ಕಷ್ಟವಾಗಿದೆ. ಇದರಿಂದ ಇರುವ ಸಣ್ಣ ಗುಂಪಿನೊಡನೆಯೇ ಮಿಲನವಾಗಿ ಸಂತತಿ



ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ

ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಬೆಂಗಳೂರು ಮೈಸೂರು 9880444450